◆ **ಮನೆಯವರು, ಊರವರು ನಿನಗ ನೀಡಿದ ಪ್ರೋತ್ಸಾಹ ಹೆಂಗಿತ್ತಮ್ಮ?**

ನನ್ನ ತಮ್ಮನೋರಿಗಿ ನನ್ನ ಪದ ಕೇಳದಂದ್ರೆ ಅಷ್ಟು ಇಷ್ಟರೀ. ಇನ್ನ ನನ್ನ ಗಂಡ ನನಗ ಎಲ್ಲಿ ಹೋಗಕೂ ಬ್ಯಾಡ ಅಂದಿಲ್ರಿ. ಒಂದ್ಸತೆ ಡೆಲ್ಲೀಗಿ ಓಗದು ಬಂದಿತ್ರಿ. ಗಂಡನ್ನ ಕಳಕಂಡು ಮಗಳು ಮನ್ಯಾಗ ಬಂದು ಕುಂತಕಂಡಿದ್ಲು. ನಮ್ಮ ಕಷ್ಟ ನಮಗ ಭಾಳಿತ್ತು. ಅಂಥದ್ರಾಗ ಏನ್ ಹಾಡ್ತೀರಿ ಹೋಗಿ? ಬ್ಯಾಡ ಬುಡಪ ಅದ ನಮ್ಮ ಮನೆತ. ನಾನೂ ಹೌದಂದು ಬುಟ್ಟುಬುಟ್ಟೆ. ಅದೊಂದು ಬುಟ್ರೆ ಎಲ್ಲಿಗೂ ನನ್ನ ಬ್ಯಾಡ ಅಂದಿಲ್ರೀ. ಮೈಸೂರು, ಬೆಂಗಳೂರು ಎಲ್ಲ ಕಡೆ ಹೋಗಿ ಬಂದೀನ್ರಿ. ಇದಕ್ಕಿಂತ ಇನ್ನೇನು ಬೇಕ್ರೀ...

ಇನ್ನ ನಮ್ಮ ಊರಾಗ ನನ್ನ ಮುಂದ ತಂದವರು ದಂಡಪ್ಪ ಮಾಸ್ತರ್, ಅಳ್ಳುಂಡಿ ರಂಗಣ್ಣೋರುರೀ. ಇನ್ನ ಊರ ಹೊರಗ ನನ್ನ ಮುಂದ ತಂದೋರು ಈರಣ್ಣ ಕೋಸಿಗಿ, ಚೆನ್ನಣ್ಣ ವಾಲೀಕಾರ, ಡಿ.ಬಿ. ನಾಯಕ್ ಅವರುರೀ.

◆ **ಈ ಪದಗಳನ್ನ ಹಾಡದ್ರಿಂದ ನಿನಗೇನ್ ಫರಕ್ ಆಗ್ಯಾದಮ್ಮ ಬದುಕಿನ್ಯಾಗ?**

ಈರಣ್ಣ ಕೋಸಿಗಿ ಅವರು ಕರಕಂಡೋಗಿ ರೇಡುವದಾಗ ಹಾಡಿಸಿದ್ರುರೀ. ರಾಯಚೂರು ರೇಡುವ ಸ್ಟೇಷನ್‌ನ್ಯಾಗ ಎಂ.ಬಿ. ಪಾಟೀಲ್ ಅವರು ಇಪ್ಪತ್ತೈದು ಕಂತಿನ್ಯಾಗ ನನ್ನಿಂದ ಪದಗಳನ್ನು ಹಾಡಿಸಿ ಕ್ಯಾಸೆಟ್ ಮಾಡಿಟ್ಟಾರ್ರೀ. ಕೋಸಗಿಯವರು ಇಪ್ಪತ್ತು ಕಾಪಿ ತುಂಬ ಆಗುವಷ್ಟು ನಾನು ಹಾಡಿದ ಪದಗಳನ್ನ ಬರದು ಇಟಗಂಡಾರ್ರೀ. ಚೆನ್ನಣ್ಣ ವಾಲೀಕಾರ ಅವರು ಬೆಂಗಳೂರಿಗಿ ಕರಕಂಡು ಹೋಗಿ ಟೀವ್ಯಾಗ ಹಾಡಿಸಿದ್ರುರೀ.

ಖೆಣೇದ್ ಸಾಹುಕಾರ್ರು, ಬಿ.ಟಿ ಲಲಿತಾನಾಯ್ಕ್, ಶಿವನಗೌಡ ನಾಯಕ್, ರಾಜಶ್ರೀ ಉಪಳಾಂವಕರ್ ಇವರೆಲ್ಲ ನನಗ ಸನ್ಮಾನ ಮಾಡ್ಯಾರ್ರೀ. ಇಲ್ಲೀತನಕ ಒಟ್ಟ ಒಂಬತ್ತು ಪ್ರಶಸ್ತಿ ಬಂದಾವ್ರೀ. 15–20 ಶಾಲು ಆವ ಮನ್ಯಾಗ. ನಾಲ್ಕು ಸಲ ಬೆಂಗಳೂರು ನೋಡಿ ಬಂದೀನ್ರಿ. ಸುಳ್ಳ್ಯಾಕ ಹೇಳಂದಿರೀ... ಇದ್ರಿಂದ ಇಪ್ಪತ್ತು ಮೂವತ್ತು ಸಾವಿರ ರೊಕ್ಕ ಗೂಡ ತಿಂದೀನಿ.

ಸಿದ್ರಾಮಯ್ಯನವರು ಹಣಕಾಸು ಮಂತ್ರಿ ಆಗಿದ್ದಾಗ ಜಾನಪದ ಅಕಾಡೆಮಿ ಪ್ರಶಸ್ತಿ ಕೊಟ್ಟಾರ್ರೀ. ಇಷ್ಟು ದೊಡ್ಡದಾದಲ್ರೀ ಪ್ರಶಸ್ತಿ, ಅದನ್ನ ಹಿಡಕಂಡ್ರೆ ಒಂದು ಕೂಸನ್ನ ಎತಿಕಂಡಂಗಾಗ್ತಾದ.

ಫರಕ್ ಅಂದ್ರೆ ಏನ್ರೀ? ನಾನು ಪದ ಹಾಡದು ಕಲ್ತೀನಂತನೇ ಈಗ ನಿಮ್ಮಂಥವರು ಹುಡಿಕ್ಕೆಂಡು ಬಂದು ಮಾತಾಡಿಸ್ತೀರಿ. ದೊಡ್ಡದೊಡ್ಡೋರು ತಮ್ಮ ಸರೀಗಿ ನನ್ನ ಮ್ಯಾಲೆ ಕುಂದರಿಸಿಗೆಂತಾರ. ಇದಕ್ಕಿಂತ ಇನ್ನೇನ್ ಬೇಕ್ರೀ.

◆ **ಸೋಬಾನ ಹಾಡು ಸತ್ತಲ್ಲಿ ಇಲ್ಲ; ಭಜನಿ ಪದ ಮೈನೆರೆತಲ್ಲಿ ಇಲ್ಲ. ಹಿಂಗ ಸಾಂಪ್ರದಾಯಿಕ ಹಾಡುಗಳಿಗೆ ಇಂತಿಂಥ ಕಾರ್ಯದಲ್ಲಿ ಇಂತಿಂಥದ್ದೇ ಪದ ಅಂತ ಇರುತ್ತ. ಆದರೆ ಈಗೆಲ್ಲ ಸಿನಿಮಾ ಹಾಡು ಬಂದು ಎಲ್ಲ ಕಾರ್ಯಕ್ಕೂ ಸಿನಿಮಾ ಹಾಡೇ ಹಾಕುವಂಥ ಕಾಲ ಬಂದಾದಲ್ಲಮ್ಮ. ಇದರ ಬಗ್ಗೆ ಏನನಸ್ತಾದ?**

ಬಂದಾವ್ರೀ ಸಿನಿಮಾ ಪದಗಳು. ಇಲ್ಲಂತಲ್ಲ. ಆದರೆ ಯಾವುದೂ ಜಾನಪದದಷ್ಟು ಮುಂದುವರ್ಯದಿಲ್ರೀ. ಯಾಕಂದ್ರೆ ಇದು ಸ್ವಂತ ತೆಲೇದು. ಅಲ್ಲೆದಲ್ಲೇ ಯಾರಂದ್ರ ಅವರ ಮ್ಯಾಲೆ ಪದ ಕಟ್ಟಿ ಹಾಡದೇನು ಸುಮ್ನೇ ಏನ್ರೀ?

ಈಗ ಸಿನಿಮಾ ಪದ ಹಾಕಿದ್ರೆ ಸಣ್ಣ ಹುಡುಗ್ರು ಕುಣಿತಾವ ನೋಡ್ರೀ ಅಷ್ಟೇ. ಆದ್ರೆ ಕಾರ್ಯೆವುಗಳಿಗಿ ಯಾರು ಬರ್ತಾರ್ರೀ... ಅದೇ ಪದ ಹಾಡಿದ್ರೆ ನಾಕು ಮಂದಿ ಬರ್ತಾರ. ಮಂದಿ ಬೇಕಲ್ರೀ ಕಾರ್ಯೆವಂದ್ರೆ. ಈಗ ನೀವೇ ಹೇಳ್ರೀ ಯಾವುದು ಚೊಲೋ ಅಂತ...